# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.

| | |
|---|---|
| ಸಿ.ಸಿ. ನಂಬರ್ | : 47/2024 |
| ಸಿ.ಡಬ್ಲ್ಯೂ | : 07 |
| ಪಿ.ಡಬ್ಲ್ಯೂ | : 06 |
| ಸಾಕ್ಷಿಯ ಹೆಸರು | : ದ್ಯಾವನಗೌಡ ಶಂಕರಗೌಡ ಕನಕಿಕೊಪ್ಪ |
| ವಯಸ್ಸು | : 50 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ ಸ್ಥಳ | : ಭೋಗಾನೂರ |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 21.02.2026.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯ ಇದೆ. ಚಾಸಾ-1 ಮತ್ತು 4 ರವರ ಪರಿಚಯವಿದೆ. ಚಾಸಾ-6 ಮತ್ತು 8 ರವರ ಪರಿಚಯವಿದೆ. ಚಾಸಾ-5 ರವರ ಪರಿಚಯವಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿ ನನಗೇನು ಮಾಹಿತಿ ಇಲ್ಲ. ಪ್ರಕರಣಕ್ಕೆ ಸಂಬಂಧಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕಃ 01-11-2020 ರಂದು ಬೆ.09.30 ಗಂಟೆಗೆ ಭೋಗಾನೂರ ಗ್ರಾಮದ ಜಿನ್ನಪ್ಪ ಗರಗ ರವರ ಮನೆಯ ಮುಂದಿನ ರಸ್ತೆಯಲ್ಲಿ ಆರೋಪಿತರು ತಮ್ಮ ಕುರಿಗಳನ್ನು ರಸ್ತೆಯ ಮೇಲೆ ನಿಲ್ಲಿಸಿಕೊಂಡಿದ್ದಾಗ ಚಾಸಾ-1, 4 ಮತ್ತು 5 ನೇದ್ದವರು ಟ್ರ್ಯಾಕ್ಟರ್ ನಲ್ಲಿ ಹೋಗುತ್ತಿದ್ದು, ಆಗ ಚಾಸಾ-1 ರವರು ಹಾರ್ನ್ ಹಾಕಿ ಮುಂದೆ ಹೋಗಲು ದಾರಿ ಬಿಟ್ಟು ಕುರಿಗಳನ್ನು ರಸ್ತೆ ಬದಿ ನಿಲ್ಲಿಸಿಕೊಳ್ಳಿ ಎಂದು ಹೇಳಿದ್ದಕ್ಕೆ 1 ನೇ ಆರೋಪಿ ಚಾಸಾ-1 ರವರಿಗೆ ಬೋಸಡಿಮಕ್ಕಳ ದಾರಿ ನಿಮ್ಮದಲ್ಲ ಎಂದು ಅವಾಚ್ಯವಾಗಿ

ಬೈದಿರುತ್ತಾನೆ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ಪುನಃ ಹಾರ್ನ್ ಹಾಕಿದ್ದರ ಸಿಟ್ಟಿನಿಂದ 1 ಮತ್ತು 2 ನೇ ಆರೋಪಿತರು ಸೇರಿಕೊಂಡು ಅವರಲ್ಲಿ 1 ನೇ ಆರೋಪಿ ತನ್ನ ಕೈಯಲ್ಲಿದ್ದ ಬಡಿಗೆಯಿಂದ ಚಾಸಾ-1 ರವರ ತಲೆಗೆ ಹೊಡೆದಿರುತ್ತಾನೆ ಎಂದರೆ ಸರಿಯಲ್ಲ. ನಂತರ ಜಗಳ ಬಿಡಿಸಲು ಬಂದ ಚಾಸಾ-4 ರವರಿಗೆ 2 ನೇ ಆರೋಪಿ ಕೈಯಿಂದ ಬೆನ್ನಿಗೆ ಹೊಡೆದು ಕಾಲಿನಿಂದ ಒದ್ದಿರುತ್ತಾನೆ ಎಂದರೆ ಸರಿಯಲ್ಲ. ನಂತರ ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ 3 ನೇ ಆರೋಪಿ ಕೈಯಿಂದ ಹೊಡೆದು ಜೀವದ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಭಾಗವನ್ನು **ನಿಪಿ-6** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್ ಸಿ ಜೆ ವಕೀಲರಿಂದಃ**

ಏನು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**